

ಕಂಡಿರುತ್ತೇವೆ. 'ಪಿನ್ ಕುಷನ್', 'ಸ್ಫಾಗ್ನಮ್' ಮುಂತಾದ ಜಾತಿಯ ಈ ಪಾಚಿಗಳನ್ನು 'ಕೊಕೆಡಾಮಾ', 'ಟೆರೇರಿಯಮ್'ಗಳಲ್ಲಿ ಬಳಸಿರುವುದನ್ನು ನೋಡಿರುತ್ತೇವೆ. ಯೂಟ್ಯೂಬ್ ನೋಡಿ ಮರದ ಚೂರು, ಕಲ್ಲು, ಜರಿಗಿಡಗಳು, ಹಾವಸೆ ಬಳಸಿ ಕಾಡಿನ ಚಿತ್ರಣ ಸೃಷ್ಟಿಸಿ, 'ಲೈವ್ ಮೋಸ್ ಫ್ರೇಮ್' ಮಾಡುವವರನ್ನು ಕಂಡಿರುತ್ತೇವೆ. ಆದರೆ ಇವು ವಾರ ಕಳೆಯುತ್ತಿದ್ದಂತೆ ತಾಜಾತನ ಕಳೆದುಕೊಂಡು ನಿಸ್ತೇಜವಾಗುತ್ತವೆ. ತೇವಾಂಶದ ಮೇಲೆಯೇ ಅವಲಂಬಿತವಾದ ಇವುಗಳ ನಿರ್ವಹಣೆ ಕಠಿಣ. ಹಾಗಾಗಿ ಮುನ್ನೆಲೆಗೆ ಬಂದಿದ್ದು ಒಣಗಿಸಿ ಸಂರಕ್ಷಿಸಲ್ಪಟ್ಟ ಪಾಚಿಗಳ ಬಳಕೆ.

ನಿಸರ್ಗದ ಹಸುರನ್ನೇ ಅಣಕಿಸುವಂತೆ ಒಳಾಂಗಣ ವಿನ್ಯಾಸದಲ್ಲಿ ಬಳಕೆಯಾಗುತ್ತಿರುವ, ಅದರಲ್ಲೂ ಐಟಿ ಕಚೇರಿಗಳಲ್ಲಿ ಕಂಡುಬರುವ ಹಸಿರು ಗೋಡೆಗಳ ಹಿಂದಿರುವ ಜಾದೂ ಇದೇ 'ಪ್ರಿಸರ್ವ್ಡ್ ಮೋಸ್'. ಹೊರಾಂಗಣದಲ್ಲೇ ಆರಿಸಿ ತಂದ ಪಾಚಿಗಳಿಂದ ಇವುಗಳನ್ನು ತಯಾರಿಸಲಾಗುತ್ತದೆ. ನೀರಿನಂಶವನ್ನೆಲ್ಲ ಕಳೆದುಕೊಂಡ ಮೇಲೆ ಜೀವಂತವಾಗಿದ್ದಂತೆ ಕಂಡರೂ ಇವು ಸಜೀವಿಗಳಲ್ಲ. ಆದರೆ ನೋಡಲು, ಮುಟ್ಟಲು ಮಾತ್ರ ಅದೇ ಹಸುರು, ಅದೇ ಮೃದುತ್ವ, ಥೇಟ್ ಜೀವಂತ ಪಾಚಿಗಳಂತೆ.

ನಮ್ಮಲ್ಲಿಯಂತೆ ಯೂರೋಪ್ ದೇಶಗಳ ಎತ್ತರದ ಹಿಮಪರ್ವತಗಳಲ್ಲಿ ವಿಶಿಷ್ಟವಾದ ಪಾಚಿಯೊಂದು ನೆಲದ ಮೇಲೆ ಹಾಸಾಗಿ ಬೆಳೆಯುತ್ತದೆ. ಕವಲು ಕವಲಾಗಿ ಬೆಳೆಯುವ ಬಿಳಿ ಬಣ್ಣದ ಈ ಪಾಚಿ ಅಲ್ಲಿನ 'ರೇನ್ ಡೀರ್' ಹಿಮಸಾರಂಗಿಗಳ ಅಚ್ಚುಮೆಚ್ಚಿನ ಆಹಾರ. ಹಾಗಾಗಿ ಈ ಪಾಚಿಗೆ 'ರೇನ್ ಡೀರ್ ಮೋಸ್' ಎಂದೇ ಕರೆಯಲಾಗುತ್ತದೆ. ಇಂದು ಮಾರುಕಟ್ಟೆಯಲ್ಲಿ ವಿವಿಧ ಬಣ್ಣಗಳಲ್ಲಿ ಲಭ್ಯವಿರುವ ಸಂರಕ್ಷಿತ ಪಾಚಿಗಳಲ್ಲಿ ಹೆಚ್ಚಿನವು ಇದೇ ರೇನ್ ಡೀರ್ ಮೋಸ್.

## ಶೂನ್ಯ ನಿರ್ವಹಣೆ

ನೈಸರ್ಗಿಕವಾಗಿ ಬೆಳೆದ ಹಾವಸೆಗಳನ್ನು ಆರಿಸಿ ತಂದು ಅವುಗಳನ್ನು ರಾಸಾಯನಿಕದಿಂದ (ಸಾಮಾನ್ಯವಾಗಿ 'ಗ್ಲಿಸರಿನ್'ನಿಂದ) ಉಪಚರಿಸಿ, ಬಣ್ಣ (ಸಾಮಾನ್ಯವಾಗಿ ಫುಡ್ ಗ್ರೇಡ್ ಬಣ್ಣ) ಬಳಿದು, ನೈಜರೂಪದಲ್ಲಿಯೇ ಸಂರಕ್ಷಿಸಲಾಗುತ್ತದೆ. ಸದ್ಯಕ್ಕೆ ನಮ್ಮ ದೇಶದಲ್ಲಿ ಇವುಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಹಾಗಾಗಿ ಬೆಲೆ ಸ್ವಲ್ಪ ಹೆಚ್ಚು. ಆದರೆ ತಾಳಿಕೆ–ಬಾಳಿಕೆ ಹಾಗೂ ಇವುಗಳ ನೈಜತೆಗೆ ಹೋಲಿಸಿದರೆ ಈ ಬೆಲೆಯೇನೂ ಭಾರವಲ್ಲ.

ದಿನನಿತ್ಯ ಬಳಕೆಯಲ್ಲಿರುವ ಗ್ಲಿಸರಿನ್, ಆಹಾರಕ್ಕಾಗಿ ಬಳಸುವ ರಂಗುಗಳನ್ನೇ ಬಳಸುವ ಕಾರಣ ಇವು ಆರೋಗ್ಯಕ್ಕೆ ಹಾನಿಕಾರಕವಲ್ಲ. ನೈಜ ರೂಪದಲ್ಲಿ ಸಂರಕ್ಷಿಸಲ್ಪಟ್ಟ ಕಾರಣ ಇವು ಬೆಳೆಯಲಾರವು. ನೀರು, ಬೆಳಕು, ಗೊಬ್ಬರಗಳ ಗೊಡವೆಯೇ ಇಲ್ಲ. ಬದುಕು–ಸಾವಿನ ಎಲ್ಲೆ ಇಲ್ಲದ ಕಾರಣ ಇವುಗಳ ನಿರ್ವಹಣೆಗೆ ಸಮಯ, ಶ್ರಮ ಎರಡೂ ಬೇಡ. ಸೊಳ್ಳೆಯಂತಹ ಯಾವುದೇ ಹುಳಗಳನ್ನು ಆಕರ್ಷಿಸುವುದೂ ಇಲ್ಲ. ಬೆಳಕಿನ ಪ್ರಕಾಶ ತೀರಾ ಹೆಚ್ಚಾದಲ್ಲಿ ಬಣ್ಣ ಮಸುಕಾಗುವ ಸಾಧ್ಯತೆ ಇದ್ದರೂ, ಒಳಾಂಗಣದಲ್ಲಿ ಈ ಸಮಸ್ಯೆಯಿಲ್ಲ.

ಸುತ್ತಲಿನ ತೇವಾಂಶಕ್ಕೆ ಅನುಗುಣವಾಗಿ ಈ ಪಾಚಿಗಳು ತಮ್ಮ ಮೃದುತ್ವ ಹೊಂದಿಸಿಕೊಳ್ಳುತ್ತವೆ. ತೇವಾಂಶ (ಶೇ. 30ಕ್ಕಿಂತ) ಕಡಿಮೆಯಾದಲ್ಲಿ ಗಡುಸಾಗಿ, ತೇವಾಂಶ ಏರುತ್ತಿದ್ದಂತೆ ಮತ್ತೆ ಮುಂಚಿನ ಮೃದುತ್ವಕ್ಕೆ ತಿರುಗುತ್ತವೆ. ಹಾಗಾಗಿ ಒಳಾಂಗಣದ ವಾತಾವರಣವನ್ನೂ ಇವು ಸೂಚಿಸಬಲ್ಲವು. ವಾತಾವರಣದ ತೇವಾಂಶ ಹೀರುವ ರೀತಿಯಲ್ಲೇ ಶಬ್ದವನ್ನೂ ಹೀರಬಲ್ಲ ಇವು 'ಸೌಂಡ್ ಪ್ರೂಫ್' ಆಗಿಯೂ ವರ್ತಿಸಬಲ್ಲವು.

## ಹಸುರು ಹೊರಮ್ಮೈ

ನೈಜ ಗಿಡಗಳನ್ನು ಬಳಸಿ ಹಸುರು ವರ್ಟಿಕಲ್ ಗಾರ್ಡನ್ ನಿರ್ಮಿಸಿ ನಿರ್ವಹಿಸಲು ಸಾಧ್ಯವಾಗದೇ ಇದ್ದಲ್ಲಿ 'ಮೋಸ್ ವಾಲ್'ಗಳನ್ನು ನಿರ್ಮಿಸಿ ಸಂತಸಪಡಬಹುದು. 'ವಾಲ್ ಪೇಪರ್'ನಂತೆ ಗೋಡೆಗೆ ಅಂಟಿಸುವ ಚಾಪೆಗಳನ್ನು ಅಂತರ್ಜಾಲ ತಾಣಗಳಲ್ಲಿ ಕೊಳ್ಳಬಹುದು.

ಟೇಬಲ್ ಮೇಲೆ ಇಡಬಹುದಾದ, ಗೋಡೆಗೂ ತೂಗು ಹಾಕಬಹುದಾದ ವಿವಿಧ ಗಾತ್ರದ ಫ್ರೇಮ್‌ಗಳಾಗಿಯೂ ಇವು ಲಭ್ಯ. ಬರಿಯ ಮೋಸ್ ಖರೀದಿಸಿ ನಮಗೆ ಬೇಕಾದ ಹಾಗೆ ಬಳಸಲೂ ಅವಕಾಶವಿದೆ. ಕಚೇರಿಗಳ ಸ್ವಾಗತಕೋಣೆಯಲ್ಲಿ 'ಲೋಗೊ' ಮೂಡಿಸುವ ನಮ್ಮ ಇಚ್ಛೆಯ ವಿನ್ಯಾಸವನ್ನು ಕಸ್ಟಮೈಸ್ ಮಾಡಿಕೊಡುವ ಹಲವಾರು ಇಂಟೀರಿಯರ್ ಡಿಸೈನ್ ಕಂಪನಿಗಳೂ ಇವೆ.

ಒಳಾಂಗಣಕ್ಕೆ ಹಸುರು ಹಚ್ಚುವ ಸುಲಭ ಹಾದಿ 'ಪ್ರಿಸರ್ವ್ಡ್ ಮೋಸ್'ಗಳ ಬಳಕೆ. ಕಾಡು ಹಸುರು, ಗಿಳಿ ಹಸುರು, ಆಕಾಶ ನೀಲಿ, ಕೆಂಪು, ಹಳದಿ, ಹೀಗೆ ಹತ್ತು ಹಲವು ಬಣ್ಣಗಳಲ್ಲಿ ಲಭ್ಯವಿರುವ ಪಾಚಿಗಳನ್ನು ಬಳಸಿ ಗೋಡೆಗಳಿಗೆ ಬಣ್ಣ ತುಂಬಬಹುದು. ಮನಸೋಲುವ ಇವುಗಳ ಮೃದು ರಚನೆಯನ್ನೊಮ್ಮೆ ಕೊಂಡು ಅನುಭವಿಸಿ ನೋಡಿ.

ಪ್ರತಿಕ್ರಿಯಿಸಿ: feedback@sudha.co.in

